# ಸಿವಿಲ್ ಜೆಡ್ಜ್ ಮತ್ತು ಜೆ .ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.

## ಸಿ.ಸಿ. ಸಂಖ್ಯೆಃ 567/2018

ಪಿರ್ಯಾದುದಾರರುಃ - ಸರ್ಕಾರದ ಪರವಾಗಿ
ಅರೇಹಳ್ಳಿ ಪೋಲೀಸ್

ವಿರುದ್ಧ

ಆರೋಪಿಃಗಳುಃ ಸುರೇಶ ಬಿನ್ ರಾಜಯ್ಯ,
ಮಲ್ಲಾಪುರ ಗ್ರಾಮ,
ಬಿಕ್ಕೋಡು ಹೋಬಳಿ,
ಬೇಲೂರು ತಾಲ್ಲೂಕು.

ಃ ದೋಷಾರೋಪಣೆ ಃ

ಶ್ರೀ ಪ್ರಸನ್ನಕುಮಾರ್ ಸಿ. ಬಿ.ಎ.ಎಲ್. ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬೇಲೂರು ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

1. ದಿನಾಂಕಃ 08-05-2018 ರದು ಬೆಳಿಗ್ಗೆ 9-30 ಗಂಟೆ ಸಮಯದಲ್ಲಿ ಅರೇಹಳ್ಳಿ ಪೋಲೀಸ್ ಠಾಣಾ ಸರಹದ್ದಿಗೆ ಸೇರುವ ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ, ಮಲ್ಲಾಪುರ ಗ್ರಾಮದ ನೀರಿನ ಬೋರ್ ವೆಲ್ ಮುಂಭಾಗದ ಕಾಂಕ್ರಿಟ್ ರಸ್ತೆಯಲ್ಲಿ ಆರೋಪಿಯಾದ ನೀವು ನೀರಿನ ಬೋರ್ ವೆಲ್ ಬಳಿ ಬಂದು ಚಾಸಾ-1 ಹೇಮಂತಕುಮಾರ್ ರವರನ್ನು ಉದ್ದೇಶಿಸಿ ನನ್ನ ಬಗ್ಗೆ ಮಾತನಾಡುತ್ತಿದ್ದೀಯಾ ಎಂದು ಕೇಳಿದ್ದು, ಆಗ ಚಾಸಾ-1 ರವರು ಚುನಾವಣೆ ಬಗ್ಗೆ ಮಾತನಾಡುತ್ತಿದ್ದೇವೆ ನಿನ್ನ ಬಗ್ಗೆ ಅಲ್ಲ ಎಂದರೂ ಕೇಳದೇ ಆರೋಪಿಯಾದ ನೀವು ಚಾಸಾ-1 ರವರಿಗೆ ಸೂಳೆಮಗನೆ ಎಂದು ಶಾಂತಿಭಂಗವಾಗುವ ರೀತಿಯಲ್ಲಿ ಅವಾಚ್ಯ ಶಬ್ಧಗಳಿಂದ ಬೈದು, ಅವರಿಗೆ ಅವಮಾನ ಮಾಡಿರುತ್ತೀರಿ. ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 504 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

2. ಎರಡನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಚಾಸಾ-1 ರವರರೊಂದಿಗೆ ಜಗಳ ತೆಗೆದು ಅಲ್ಲೆ ಬಿದ್ದಿದ್ದ ಮಾರಕ ಆಯುಧವಾದ

ದೊಣ್ಣೆಯಿಂದ ಚಾಸಾ-1 ತಲೆಯ ಎಡಭಾಗಕ್ಕೆ ಅಂದರೆ ಕಿವಿ ಭಾಗಕ್ಕೆ ಹಾಗೂ ತಲೆಗೆ ಹಾಗೂ ಎಡಪಕ್ಕೆಗೆ ಹಾಗೂ ಎರಡು ಕಾಲುಗಳಿಗೆ ಹಲ್ಲೆ ಮಾಡಿ ಸ್ವಯಪ್ರೇರಿತ ಸಾಧಾರಣ ಸ್ವರೂಪದ ರಕ್ತಗಾಯಪಡಿಸಿರುತ್ತೀರಿ. ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 324 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

3. ಮೂರನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಚಾಸಾ-1 ರವರರೊಂದಿಗೆ ಜಗಳ ತೆಗೆದು, ಚಾಸಾ-1 ರವರನ್ನು ಕೆಳಕ್ಕೆ ಕೆಡವಿಕೊಂಡು ಕೈಗಳಿಂದ ಚಾಸಾ-1 ರವರ ಬಲಗೈಗೆ, ಎದೆಗೆ ಹೊಡೆದು ಸ್ವಯಪ್ರೇರಿತ ಸಾಧಾರಣ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 323 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 07-01-2022

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು.

# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.
## ಸಿ.ಸಿ. ಸಂಖ್ಯೆ: 567/2018

ಆರೋಪಿಯ ಹೆಸರು : ಸುರೇಶ
ತಂದೆ:ಗಂಡನ ಹೆಸರು : ರಾಜಯ್ಯ
ವಯಸ್ಸು : -
ವಾಸ ಸ್ಥಳ : ಮಲ್ಲಾಪುರ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು.

ಪ್ರಶ್ನೆ:1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರ:

ಪ್ರಶ್ನೆ:2 ಸದರೀ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ?
ಅಥವಾ ವಿಚಾರಣೆಯಾಗಬೇಕೋ?
ಉತ್ತರ:

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಢೀಕರಿಸುತ್ತೇನೆ.

ಸ್ಥಳ: ಬೇಲೂರು
ದಿನಾಂಕ: 07-01-2022

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು